CW-02
PW-02

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 04/2022

ದಿ. 18-09-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-02
ಫ್ರಾಸಾ-02

| | |
|---|---|
| ಸಾಕ್ಷಿದಾರರ ಹೆಸರು | ತಿಮ್ಮರೆಡ್ಡಿ |
| ತಂದೆಯ ಹೆಸರು | ಹನುಮಯ್ಯ |
| ವಯಸ್ಸು | 25 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಾಚನೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ಚಾಸಾ-1 ನನ್ನ ಹೆಂಡತಿ.

2. ನಾವು ಹಿಂದೂ ನಾಯಕ ಜಾತಿಗೆ ಸೇರಿದವಳಾಗಿರುತ್ತೇನೆ.

3. ಚಾಸ-3 ನನ್ನ ತಾಯಿ.

4. ಚಾಸಾ-4 ರಿಂದ 7 ನನಗೆ ಗೊತ್ತು.

5. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

6. ಈಗ ಸುಮಾರು 4 ವರ್ಷಗಳ ಹಿಂದೆ ಒಂದು ದಿನ ಚಾಸಾ-1 ಇವಳು ನಮ್ಮ ಹೊಲದಿಂದ ಸಾಯಂಕಾಲ 6 ಗಂಟೆ ಸಮಯದಲ್ಲಿ ಮನೆಗೆ ಮರಳಿ

CW-02
PW-02

ಬರುತ್ತಿದ್ದಾಗ ದಾರಿಯಲ್ಲಿ ಆರೋಪಿತನು ಅವಳಿಗೆ ಅಕ್ರಮವಾಗಿ ತಡೆದು ತನ್ನ ಮೊಬೈಲ್ ನಂಬರ ಕೊಡಲು ಪ್ರಯತ್ನಿಸಿದಾಗ ಸದರಿ ಚಾಸಾ-1 ಇವಳು ಅದನ್ನು ತಿರಸ್ಕರಿಸಿದ್ದಕ್ಕೆ ಆರೋಪಿತನು ಕೈ ಹಿಡಿದು ಎಳೆದಾಗ ಅದರಿಂದ ತಪ್ಪಿಸಿಕೊಂಡು ಮನೆಗೆ ಬಂದು ನನಗೆ ರಾತ್ರಿ ಹೇಳಿದಾಗ ನಾವು ಆರೋಪಿತನ ಮನೆಗೆ 8 ಗಂಟೆಗೆ ಹೋಗಿ ವಿಚಾರಿಸಿದಾಗ ಸದರಿ ಆರೋಪಿತನು ನಮ್ಮೊಂದಿಗೆ ಜಗಳ ಕಾಯ್ದು, ಬೇಡರ ಸೂಳೆಮಕ್ಕಳೇ ನನಗೆ ಕೇಳಲು ಬಂದಿರುತ್ತಾರೆ ಎಂದು ಹೇಳಿ ನನಗೆ ಕೈಯಿಂದ ಹೊಡೆ ಬಡಿ ಮಾಡಿದ್ದಲ್ಲದೇ ನನ್ನ ಅಂಗಿ ಹರಿದಿರುತ್ತಾರೆ.

7. ಅದು ಅಲ್ಲದೇ ಆರೋಪಿತನು ಚಾಸಾ-1 ಇವಳಿಗೆ ಜೀವನ ಬೆದರಿಕೆಯನ್ನು ಸಹ ಹಾಕಿರುತ್ತಾನೆಂದು ಚಾಸಾ-1 ನನಗೆ ತಿಳಿಸಿರುತ್ತಾಳೆ.

8. ನಂತರ ಪೊಲೀಸರಲ್ಲಿ ದೂರನ್ನು ಸಲ್ಲಿಸಿರುತ್ತೇನೆ.

9. ತದನಂತರ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಈಗಾಗಲೇ ಗುರುತಿಸಲಾಗಿರುವ ನಿಪಿ-2 ರಂತೆ ಒಂದು ಸ್ಥಳ ಪಂಚನಾಮೆಯನ್ನು ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನಿಂದ 1 ಅಂಗಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

10. ಸದರಿ ಪಂಚನಾಮೆಯಲ್ಲಿ ನಾನು ಮಾಡಿದ ಸಹಿಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

CW-02
PW-02

11. ಅದೇ ಸಮಯದಲ್ಲಿ ಪೊಲೀಸರು 2 ವರ್ಣ ರಂಜಿತ ಛಾಯಾ ಚಿತ್ರಗಳನ್ನು ಸಹ ತೆಗೆಸಿದ್ದು, ಅವುಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಕಲ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲಃ ಶ್ರಿ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರವಾಗಿಃ**

**(ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ಮಾನ್ಯ ಸರ್ವೋಚ್ಛ ನ್ಯಾಯಾಲಯಾವು ವಿನೋದ್ ಕುಮಾರ v/s ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಪಾಟೀ ಸವಾಲನ್ನು ಮುಖ್ಯ ವಿಚಾರಣೆ ಮುಗಿದ ತಕ್ಷಣವೇ ಮಾಡಿ ಮುಗಿಸಬೇಕೆಂದು ಹೇಳಿರುವುದರಿಂದ, ಸಮಯಾವಕಾಶ ಕೊಡಲು ಯಾವುದೇ ಸಕಾರಣ ಇರದೇ ಇರುವುದರಿಂದ ಅವರ ಮನವಿಯನ್ನು ನಿರಾಕಾರಿಸಿ ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.